ವಂಶವಾಹಿಯ ಅಭಿವ್ಯಕ್ತಿಯಲ್ಲಿ ಪರಿಸರದ ಅಂಶಗಳ ಪ್ರಭಾವವನ್ನು ಕುರಿತಾದ 'ಎನ್‌ವೈರನ್‌ಮೆಂಟಲ್ ಎಪಿಜೆನಿಟಿಕ್ಸ್' ತೀವ್ರಗತಿಯಲ್ಲಿ ಬೆಳವಣಿಗೆ ಕಾಣುತ್ತಿರುವ ಕ್ಷೇತ್ರವಾಗಿದೆ.

ಸಾಮಾಜಿಕ ಸಾಂಸ್ಕೃತಿಕ ಅಸಮಾನತೆಯಿಂದ ಹುಟ್ಟಿಕೊಂಡ ವ್ಯತ್ಯಾಸಗಳಿಗೆ ಜೀವಶಾಸ್ತ್ರೀಯ ಬಣ್ಣ ಕೊಡುವ ಸಂದರ್ಭಗಳು ಮತ್ತೆ ಮತ್ತೆ ಎದುರಾಗುತ್ತವೆ. ಹುಟ್ಟಿನಿಂದಲೇ ಇಂತಹವರು ಶ್ರೇಷ್ಠ ಎಂಬ ವಾದಗಳನ್ನು, ಒಂದು ಜಾತಿಯ, ಜನಾಂಗದ, ವರ್ಣದ, ದೇಶದ, ಲಿಂಗದ ಜನರ ಶೋಷಣೆಗೆ ಅಸ್ತ್ರವಾಗಿ ಬಳಸಿಕೊಂಡ ಪ್ರಸಂಗಗಳು ಚರಿತ್ರೆಯಲ್ಲಿ ಯಥೇಚ್ಛವಾಗಿವೆ. ಆರ್ಯನ್ ಜನಾಂಗದ ಶ್ರೇಷ್ಠತೆಯನ್ನು ಸಾರಿ ಹೊರಟ 'ನಾಜಿ' ಕ್ರೌರ್ಯವನ್ನು ಜಗತ್ತು ಮರೆಯಲು ಸಾಧ್ಯವೆ?

ವ್ಯಾಟ್ಸನ್ ಮಹಿಳೆಯರತ್ತಲೂ ಸಾರ್ವಜನಿಕವಾಗಿ ಹೀಯಾಳಿಕೆಯ ಮಾತುಗಳನ್ನು ಆಡುತ್ತಿದ್ದರು. 'ಪಾಶ್ಚಾತ್ಯ ಬಿಳಿಯ ಪುರುಷರು' ಎಲ್ಲರಿಗಿಂತ ಬುದ್ಧಿವಂತರೆಂಬ ಪೂರ್ವಗ್ರಹ ವ್ಯಾಟ್ಸನ್ ಅವರ ವ್ಯಕ್ತಿತ್ವದ ಭಾಗವಾದಂತಿತ್ತು. ಅವರ ಜನಾಂಗೀಯವಾದದ ಸಿದ್ಧಾಂತಗಳು ಹಾಗೂ ಲಿಂಗ ತಾರತಮ್ಯದ ಮಾತುಗಳಿಂದಾಗಿ ವಿಜ್ಞಾನ ಜಗತ್ತು ಅವರನ್ನು ಒಂದು ಬಗೆಯಲ್ಲಿ ಬಹಿಷ್ಕರಿಸಿದ್ದರೆ ಅಚ್ಚರಿಯಲ್ಲ.

ಅಂದಹಾಗೆ ವ್ಯಾಟ್ಸನ್ 'ಭಾರತೀಯರು ಸರ್ವೈಲ್' ಎಂದು ಅಭಿಪ್ರಾಯ ಪಟ್ಟಿದ್ದರು. ಇಂಗ್ಲಿಷಿನ 'ಸರ್ವೈಲ್' ಪದಕ್ಕೆ 'ಸೇವಕ, ಗುಲಾಮಗಿರಿಯ ಮನೋಭಾವ' ಎಂಬ ಅರ್ಥಗಳಿವೆ.

## 'ಹ್ಯೂಮನ್ ಜೀನೋಮ್' ಯೋಜನೆ

ಇಷ್ಟೆಲ್ಲ ವಿವಾದಗಳ ನಡುವೆಯೂ ವ್ಯಾಟ್ಸನ್ ಅವರು ಜೆನಿಟಿಕ್ ರಂಗಕ್ಕೆ ನೀಡಿದ ಕೊಡುಗೆಯನ್ನು ನಾವು ಮರೆಯುವಂತಿಲ್ಲ. 1990ರಲ್ಲಿ ವ್ಯಾಟ್ಸನ್ ಅವರನ್ನು 'ಹ್ಯೂಮನ್ ಜೀನೋಮ್ ಪ್ರಾಜೆಕ್ಟ್'ನ ಮುಖ್ಯಸ್ಥರಾಗಿ ನೇಮಿಸಲಾಯಿತು. ಈ ಯೋಜನೆಯ ಉದ್ದೇಶ ಮಾನವ ಡಿ.ಎನ್.ಎ.ಯಲ್ಲಿಯ 3 ಬಿಲಿಯನ್ ರಾಸಾಯನಿಕ ಘಟಕಗಳನ್ನು ಅನುಕ್ರಮವಾಗಿ ಜೋಡಿಸುವುದಾಗಿತ್ತು. ಈ ಯೋಜನೆ ಮನುಷ್ಯ ದೇಹದ ನೀಲಿನಕಾಶೆಯನ್ನು ತಯಾರಿಸಿತು. ಜೀವವಿಜ್ಞಾನದ ಮೈಲಿಗಲ್ಲಾದ ಈ ಯೋಜನೆ ವೈದ್ಯ ರಂಗದಲ್ಲಿ ಕ್ರಾಂತಿ ತಂದಿತು. ಇಂದು ಜೆನಿಟಿಕ್ ರಂಗದ ವೇಗದ ಬೆಳವಣಿಗೆಯನ್ನು ಇಸವಿ 2020ರಲ್ಲಿ ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತ ಇಬ್ಬರು ಮಹಿಳಾ ವಿಜ್ಞಾನಿಗಳ ಕ್ರಾಂತಿಕಾರಿ ಸಂಶೋಧನೆಯಲ್ಲಿ ಕಾಣಬಹುದು. ಫ್ರೆಂಚ್ ವಿಜ್ಞಾನಿ ಇಮ್ಯಾನ್ಯುಯೆಲ್ ಶಾರ್‌ಪೆನ್‌ಷೀರ್ ಮತ್ತು ಅಮೆರಿಕದ ಜೆನಿಫರ್ ಡೌಡ್ನಾ ವಂಶವಾಹಿಗಳನ್ನು ಕತ್ತರಿಸಿ ಜೋಡಿಸಬಲ್ಲ 'ಜೀನೋಮ್ ಎಡಿಟಿಂಗ್' ವಿಧಾನವನ್ನು ವಿಕಾಸಗೊಳಿಸಿದರು.

ನಿಜ, ನಮ್ಮ ವಂಶವಾಹಿಗಳು ಈ ರೋಗಗಳು ಬಂದೇ ಬರುತ್ತದೆ ಅಥವಾ ಬರುವುದೇ ಇಲ್ಲ ಎಂದು ನಿಖರವಾಗಿ ಹೇಳಲಾರವು. ಆದರೆ ಹಲವು ರೋಗಗಳು ಬರುವ ಸಾಧ್ಯತೆಯ ಸೂಚನೆಯನ್ನು ನೀಡಬಲ್ಲವು. ರೋಗಗಳು ಬರುವ ಮೊದಲೆ, ಬಾರದಂತೆ ವಂಶವಾಹಿ ಚಿಕಿತ್ಸೆಯಿಂದ ತಡೆಯಲು ಸಾಧ್ಯವಾಗುವಂತಹ ಶಕ್ತ ಸಲಕರಣೆಯಾಗಿ 'ಜೆನಿಟಿಕ್ ಕತ್ತರಿ'ಯನ್ನು ಈ ಇಬ್ಬರು ವಿಜ್ಞಾನಿಗಳು ನೀಡಿದ್ದಾರೆ.

***

ಅಂದಹಾಗೆ, ನಮ್ಮ ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯ ತುದಿಯಲ್ಲಿ 'ಡಬಲ್ ಹೆಲಿಕ್ಸ್' ಸ್ಮಾರಕ ಶಿಲ್ಪವಿದೆ. ಅದರ ಅಡಿಯಲ್ಲಿ, ಕೇವಲ ವ್ಯಾಟ್ಸನ್ ಮತ್ತು ಕ್ರಿಕ್ ಅವರ ಹೆಸರುಗಳಿವೆ. ಅಲ್ಲಿ ರೋಸಲಿಂಡ್ ಫ್ರಾಂಕ್ಲಿನ್ ಹೆಸರು ನ್ಯಾಯವಾಗಿ ಸೇರಬೇಕಿದೆ.

ವ್ಯಾಟ್ಸನ್ ಅವರ ವಿವಾದಾತ್ಮಕ ಹೇಳಿಕೆಗಳು ಏನೇ ಇರಲಿ, ಜೆನಿಟಿಕ್ ರಂಗಕ್ಕೆ ಅವರು ನೀಡಿರುವ ಕೊಡುಗೆ ಸ್ಮರಣೀಯವಾಗಿದೆ.


ಓದುಗರಿಗೂ ಸುಗ್ಗಿ ಕಾಲ

# ಸುಧಾ

## ಯುಗಾದಿ ವಿಶೇಷಾಂಕ-2026

ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ? ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಓದುಗರ ವೇದಿಕೆಗೆ ಎರಡು ವಿಷಯಗಳನ್ನು ಸೂಚಿಸಲಾಗಿದೆ.

## ಓದುಗರ ವೇದಿಕೆ







- ಬರಹಗಳು 250 ಶಬ್ದ ಮೀರದಿರಲಿ.
- ಸ್ಪರ್ಧೆಗೆ ಕಳುಹಿಸುವ ಬರಹಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಓದುಗರ ವೇದಿಕೆ'ಗೆ ಎಂದು ನಮೂದಿಸಿ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
ಜನವರಿ 20, 2026

ವಿಳಾಸ: ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ,
ಓದುಗರ ವೇದಿಕೆ, ನಂ. 75, ಮಹಾತ್ಮ
ಗಾಂಧಿ ರಸ್ತೆ, ಬೆಂಗಳೂರು 560001

ಇ–ಮೇಲ್: ugadi@sudha.co.in